

ಕೊಟ್ರೇಶ ನೊಂದುಕೊಳ್ಳುತ್ತಾರೆ. ಅವರದ್ದು 20 ಎಕರೆಗೂ ಹೆಚ್ಚು ಜಮೀನು ಇದೆ. ಜಾನುವಾರುಗಳು ಇವೆ. ಕೂಡು ಕುಟುಂಬವೂ ಇದೆ.

ಇಪ್ಪತ್ತು ವರ್ಷಗಳ ಹಿಂದೆ ಸರ್ಕಾರಿ ನೌಕರಿ ಬಗ್ಗೆ ಬಹಳ ಹುಚ್ಚಿತ್ತು. ಈಗ ಅಲ್ಲಿಯೂ ಕೂಡ ನೇಮಕಾತಿ ವ್ಯವಸ್ಥೆಯಲ್ಲಿ ಬದಲಾವಣೆ ಆಗಿದೆ. ಎಲ್ಲವೂ ಅರೆಕಾಲಿಕ ಮತ್ತು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಆಗುತ್ತಿರುವ ಕಾರಣ ಜನರು ಈಗ ಡಾಕ್ಟರ್, ಎಂಜಿನಿಯರ್, ಐಟಿ–ಬಿಟಿ ನೌಕರನ ಮೇಲೆ ಕಣ್ಣು ನೆಟ್ಟಿದ್ದಾರೆ.

‘ಕೈ ತುಂಬಾ ಸಂಬಳ ಬರುತ್ತೆ. ಪ್ರಾಜೆಕ್ಟ್ ನೆಪದಲ್ಲಿ ದೇಶ–ವಿದೇಶ ಸುತ್ತುವ ಅವಕಾಶ ಸಿಗುತ್ತೆ. ದೊಡ್ಡ ಊರುಗಳಲ್ಲಿ ವಾಸವಿರುವುದಿಂದ ತಮ್ಮ ಮಗಳಿಗೆ ಕೆಲಸ ಮಾಡುವಂತಹ ಅವಶ್ಯಕತೆ ಬೀಳಲ್ಲ. ಕೆಲಸಗಾರರು ಇರುತ್ತಾರೆ ಎಂದೆಲ್ಲ ಕಲ್ಪನೆ ಮಾಡಿಕೊಂಡು ಹುಡುಗಿಯ ಪೋಷಕರು ವರ್ಷಾನುಗಟ್ಟಲೆ ಸೂಕ್ತ ವರನಿಗಾಗಿ ಕಾಯುತ್ತಾರೆ. ಇದು ಇತ್ತೀಚಿನ ವರ್ಷಗಳ ಟ್ರೆಂಡ್’ ಎಂದು ಮನಶಾಸ್ತ್ರಜ್ಞ ಡಾ. ಪ್ರಶಾಂತ್ ಹೇಳುತ್ತಾರೆ.

### ಕಾರ್ಮಿಕರು, ಮಧ್ಯಮ ವರ್ಗದ ಸಂಕಷ್ಟ

ರೈತರು ಅಷ್ಟೇ ಅಲ್ಲ, ಕೂಲಿ ಕಾರ್ಮಿಕರು, ಅಂಗಡಿಗಳಲ್ಲಿ ಸಣ್ಣಪುಟ್ಟ ಕೆಲಸ ಮಾಡುವವರು, ಅತಿಥಿ ಉಪನ್ಯಾಸಕರು–ಶಿಕ್ಷಕರು, ಸಂಘಸಂಸ್ಥೆಗಳಲ್ಲಿ ತಾತ್ಕಾಲಿಕವಾಗಿ ನೌಕರಿಯನ್ನು ಪಡೆದವರು ಕೂಡ ಮದುವೆ ಸಾಧ್ಯವಾಗುತ್ತಿಲ್ಲ. ಕಾರಣ: ಹುಡುಗಿ ಅಲ್ಲದೇ ಆಕೆಯ ಮನೆಯವರು ಗಂಡನಲ್ಲಿ ಉದ್ಯೋಗ ಭದ್ರತೆ, ಕೌಟಂಬಿಕ ವ್ಯವಸ್ಥೆ, ಹಿನ್ನಲೆ ಮತ್ತು ಭವಿಷ್ಯದ ಬಗ್ಗೆ ಆಲೋಚಿಸುತ್ತಾರೆ. ಮದುವೆ ನೆಪದಲ್ಲಿ ಮಗಳು ಸಂಕಷ್ಟದ ಸುಳಿಯಲ್ಲಿ ಸಿಲುಕಿದರೆ ಏನು ಮಾಡುವುದು ಆಕೆಯ ತಂದೆ–ತಾಯಿಯದ್ದು.

‘ಮೊದಲೆಲ್ಲ ಅಂದ್ರೆ 40 ರಿಂದ 50 ವರ್ಷಗಳ ಹಿಂದೆ ಮದುವೆ ಎಂದರೆ ಸಂಭ್ರಮಕ್ಕೆ ಕಾರಣವಾಗುತಿತ್ತು. ಹುಡುಗ ಅಥವಾ ಹುಡುಗಿ ಬಾಳ್ವೆಗೆ ಯೋಗ್ಯ ಮತ್ತು ಆರೋಗ್ಯವಾಗಿದ್ದರೆ ಸಾಕು ಎಂಬ ಸ್ಥಿತಿ ಇತ್ತು. ಗಂಡನ ಕಷ್ಟದಲ್ಲಿ ಹೆಂಡತಿ, ಆಕೆಯ ಸಂಕಷ್ಟದಲ್ಲಿ ಆತ ಸಹಕರಿಸಿಕೊಂಡು ಕುಟುಂಬ ನಿಭಾಯಿಸುತ್ತಿದ್ದರು. ಆರ್ಥಿಕ ಸಮಸ್ಯೆ ಎದುರಾದರೆ, ಪರಸ್ಪರ ಚರ್ಚಿಸಿ ಯೋಜನೆ ರೂಪಿಸುತ್ತಿದ್ದರು. ಪತ್ನಿ ಕೆಲಸಕ್ಕೆ ಹೋದರೆ, ಪತಿ ಹೆಚ್ಚುವರಿ ಕೆಲಸ ಮಾಡುತ್ತಿದ್ದ. ಆದರೆ, ಈಗ ಪರಿಸ್ಥಿತಿಯೇ ಬದಲಾಗಿದೆ. ಈಗ ಶೋಷಣೆಯೇ ಮೇಲುಗೈ ಪಡೆದಿದೆ. ಒಂದು ವೇಳೆ ಗಂಡ ನಿಗದಿತ ಪ್ರಮಾಣದಲ್ಲಿ ಹಣ ತಾರದಿದ್ದರೆ ಅಥವಾ ಬೇಡಿಕೆಗಳನ್ನು ಈಡೇರಿಸಿದ್ದರೆ, ಹೆಂಡತಿ ತವರು ಮನೆಯತ್ತ ಮುಖ ಮಾಡತ್ತಾಳೆ. ಸಣ್ಣಪುಟ್ಟ ಕಾರಣಕ್ಕೆ ನಡೆದ ಜಗಳ ತಾರಕಕ್ಕೇರಿ ವಿಚ್ಛೇದನಕ್ಕೆ ಆಸ್ಪದ ನೀಡುತ್ತವೆ’ ಎಂದು ನಿವೃತ್ತ ಸರ್ಕಾರಿ ನೌಕರ ವಾಸುದೇವ ರಾವ್ ತಿಳಿಸಿದರು.

ಮದುವೆಯಲ್ಲಿನ ಕಲಹ, ಬಿರುಕು, ಸಮಸ್ಯೆಗಳು ಕಂಡು ಕೆಲವರು ಮದುವೆ ಆಗಲು ನಿರಾಕರಿಸುತ್ತಾರೆ. ಒಂಟಿಯಾಗಿಯೇ ಚೆನ್ನಾಗಿದ್ದೇವೆ. ಯಾರನ್ನೋ ಕಟ್ಟಿಕೊಂಡು, ಮಕ್ಕಳನ್ನು ಹುಟ್ಟಿಸಿಕೊಂಡು, ವರ್ಷಗಟ್ಟಲೇ ಅಪರಿಚಿತರಂತೆ ಏಗುವ ಬದಲು ಒಂಟಿಯಾಗಿ ಇರುವುದೇ ಮೇಲು ಎಂಬ ಭಾವನೆ ಹಲವರಲ್ಲಿ ನಿಧಾನವಾಗಿ ಮೂಡತೊಡಗಿದೆ. ಈ ಕಾರಣದಿಂದಲೂ ಮದುವೆಯಾಗುವವರ ಸಂಖ್ಯೆ ಕಡಿಮೆ ಆಗತೊಡಗಿದೆ. ‘ಸಿಂಗಲ್’ ಆಗಿರುವವರ ಸಂಖ್ಯೆ ಹೆಚ್ಚತೊಡಗಿದೆ. ■

